ಮೈಸೂರು ವಿಧಾನ ಸಭೆ

MYSORE LEGISLATIVE ASSEMBLY

Tuesday, 29th September 1970.

The House met in the Assembly Chamber, Vidhana Soudha, at Nine of the Clock.

MR. SPEAKER (SRI S. D. KOTHAVALE) in the Chair.

Obituary Reference

re : **Demise of Sri Konasale Thammanna Gowda**

MR. SPEAKER.—Before going to the business before the House, I have to make an obituary reference.

I regret to inform the death of Sri Konasale Thammanna Gowda on 25th September 1970. He was a member of the Representative Assembly during the Pre-Independence days. Sri Konasale Thammanna Gowda was connected with a number of institutions in Maddur and was also Ex-Municipal President, Maddur.

On behalf of the members of the House, I shall convey the condolences of the House to the members of the bereaved family.

I request all members to stand in silence for a minute as a mark of respect to the departed soul.

(*The Members stood in silence for a minute*)

STARRED QUESTIONS

(to which oral answers were given)

Recognition to Kannada School at Yalavalli Majare of Kumta Taluk

17. **SRI M. M. JALISATGI** (Bhatkal).—

Will the Minister for Education be pleased to state :—

(*a*) whether the people of Yalavalli Majare of Kulave village belonging to Santheguli Panchayat Kumta taluk have submitted many representations since 1969 to the Government requesting them to recognise the Kannada school established in Yalavalli Majare ;

(SRI M. M. JALISATGI)

(*b*) whether it has not come to the notice of the Government that this village being in the forest area is educationally backward ;

(*c*) whether the Government has any difficulty in according recognition to this school ;

(*d*) if so, whether they are contemplating to take over this school ?

Sri N. M. KOTRABASAIAH SOGI (Deputy Minister for Education).–

(*a*) Such applications do not appear to have reached the department.

(*b*) Yes. But there are two Government Schools in Yelavalli Majare and Kulve villages.

(*c*) and (*d*) Do not arise in view of reply to clause (*a*).

ಶ್ರೀ ಎಂ. ಎಂ. ಜಾಲಿಸಟಗಿ.—(ಅ) ಪ್ರಶ್ನೆಗೆ ಉತ್ತರವಾಗಿ ಯಾಲವಳ್ಳಿ ಮಜರೆ ಮತ್ತು ಕುಲವೇಹಳ್ಳಿಗಳಲ್ಲಿ ಸರ್ಕಾರದ ಎರಡು ಶಾಲೆಗಳಿವೆ ಎಂದು ಹೇಳಿದ್ದೀರಿ. ನನ್ನ ತಿಳಿವಳಿಕೆ ಮಟ್ಟಿಗೆ ಅಲ್ಲಿ ಶಾಲೆಗಳು ಇಲ್ಲ. ಮತ್ತು ಅಲ್ಲಿಯ ಜನರು ಕಳೆದ ಎರಡು ವರ್ಷದಿಂದ ಒಂದು ಖಾಸಗೀ ಶಾಲೆಯನ್ನು ನಡೆಸುತ್ತಿದ್ದಾರೆ. ಸರ್ಕಾರದವರು ನಡೆಸುತ್ತಿರುವ ಶಾಲೆಗಳು ಪ್ರಾರಂಭವಾಗಿ ಎಷ್ಟು ವರ್ಷಗಳಾಯಿತು ಎಂಬುದನ್ನು ಹೇಳುತ್ತೀರಾ ?

† ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಯಾಲವಳ್ಳಿ ಮಜರೆ ಮತ್ತು ಕುಲವೇಹಳ್ಳಿಗಳಲ್ಲಿ ಸರ್ಕಾರದ ಎರಡು ಶಾಲೆಗಳು 1968–69 ರಿಂದ ನಡೆಯುತ್ತಿವೆ.

ಶ್ರೀ ಎಂ. ಎಂ. ಜಾಲಿಸಟಗಿ.—ಇಲ್ಲಿ ಪ್ರಶ್ನೆಗೆ ಉತ್ತರವಾಗಿ ಅರ್ಜಿಗಳು ಬಂದಿಲ್ಲ ಎಂದು ಹೇಳಿದ್ದೀರಿ. ಶಿಕ್ಷಣ ಇರಾಖೆಯಲ್ಲಿ ಚೌಕಾಸಿ ಮಾಡಿದಾಗ ಅರ್ಜಿ ಬಂದಿದೆ ಎಂಬುದು ನನ್ನ ನಜರಿಗೆ ಬಂದಿದೆ. ತಾವು ಮತ್ತೊಂದು ಸಲ ಚೌಕಾಸಿ ಮಾಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅರ್ಜಿ ಬಂದಿರುವ ಬಗ್ಗೆ ಮಾಹಿತಿ ಇಲ್ಲ. ತಾವು ಮತ್ತೊಂದು ಅರ್ಜಿ ಕೊಟ್ಟರೆ ಅದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ಅಲ್ಲಿ ಶಾಲೆಯ ಅವಶ್ಯಕತೆ ಇದೆ ಎಂಬುದಾಗಿ ಅಲ್ಲಿಯ ಶಾಲಾ ಇನ್‌ಸ್ಪೆಕ್ಟರ್ ಅವರು ವರದಿ ಮಾಡಿದರೆ ಶಾಲೆಯನ್ನು ಪ್ರಾರಂಭ ಮಾಡುತ್ತೇವೆ. ಪ್ರತಿವರ್ಷ ನಾವು ಸೆನ್‌ಸಸ್ ಮಾಡುತ್ತೇವೆ. ಅದರ ಪ್ರಕಾರ ಅಲ್ಲಿ ಶಾಲೆ ಪ್ರಾರಂಭ ಮಾಡಬೇಕಾದ ಅವಶ್ಯಕತೆ ಇದ್ದರೆ ಪ್ರಾರಂಭ ಮಾಡುತ್ತೇವೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಕುಮಟಾ ತಾಲ್ಲೂಕು ಸಂತೇಗುಳಿ ಪಂಚಾಯಿತಿಗೆ ಸೇರಿದ ಕುಲವೇ ಗ್ರಾಮದ ಪೈಕಿ ಯಾಲವಳ್ಳಿ ಮಜರೆಯಲ್ಲಿ ಒಂದು ಕನ್ನಡ ಶಾಲೆಯನ್ನು ನಡೆಸುವ ಬಗ್ಗೆ ಇನ್ನೂ ಅನುಮತಿ ಕೊಟ್ಟಿಲ್ಲ. ಆದಷ್ಟು ಜಾಗ್ರತೆ ಸರ್ಕಾರದವರೇ ಅಲ್ಲಿ ಶಾಲೆಯನ್ನು ನಡೆಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಆ ಭಾಗದಲ್ಲಿ ಈಗಾಗಲೇ ಎರಡು ಸರ್ಕಾರೀ ಶಾಲೆಗಳು ಇವೆ. ಆದ್ದರಿಂದ ಶಾಲೆಯನ್ನು ನಡೆಸುವ ಬಗ್ಗೆ ಅನುಮತಿ ಕೊಡುವ ಅವಶ್ಯಕತೆಯೇ ಬರುವುದಿಲ್ಲ.

---

† Indicates that the remarks or speeches have not been revised by the member concerned.

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ್.—ಉತ್ತರ ಕನ್ನಡ ಜಿಲ್ಲೆ ಅರಣ್ಯ ಪ್ರದೇಶದ ಜಿಲ್ಲೆಯಾಗಿದೆ. ಒಂದು ಶಾಲೆ ಪ್ರಾರಂಭ ಮಾಡಬೇಕಾದರೆ 25 ಜನ ಹುಡುಗರು ಇರಬೇಕೆಂದು ನಿಯಮವಿದ್ದರೂ ಕೂಡ ಈ ಪ್ರದೇಶದಲ್ಲಿ 15 ಜನ ಹುಡುಗರು ಇದ್ದರೆ ಒಂದು ಶಾಲೆ ಪ್ರಾರಂಭ ಮಾಡಬಹುದೆಂದು ಹಿಂದಿನ ಮುಂಬೈ ರೂಲ್ಸ್‌ನಲ್ಲಿ ಇತ್ತು. ಆ ರೂಲ್ಸ್‌ನ್ನು ನಮ್ಮ ಸರ್ಕಾರ ದವರು ಮುಂದುವರೆಸಿದ್ದಾರೆಯೇ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅದೇ ಪದ್ಧತಿಯನ್ನು ಮುಂದುವರೆಸಿದ್ದೇವೆ.

Work relating to Chakenahalli Project in Holenarasipur Taluk

35. Sri H. N. NANJE GOWDA (Arkalgud).—

Will the Minister of State for Minor Irrigation be pleased to state :—

(*a*) when the construction work of the Chakenahalli Project in Holenarasipur Taluk in Hassan District was commenced and the estimated cost of the said Project when it was commenced ;

(*b*) the name of the contractor to whom the work was entrusted ; the time stipulation for the completion of this work that was agreed by the contractor when the work was entrusted and whether the work has been completed within the stipulated time (a copy of the tender agreement may be placed on the Table of the House) ;

(*c*) if not, the reason for the same ;

(*d*) whether Government has taken action against the contractor for not completing the work within the time stipulated in the agreement ;

(*e*) whether the estimate was revised later on ; if so, the compelling reasons for revising the estimates later and the cost of the revised estimate ;

(*f*) whether the same contractor continued the work or it was given to some other contractor ; and if it was given to some other contractor, was it by inviting fresh tenders or on piecework basis ?

Smt. BASAVARAJESWARI (Deputy Minister for Social Welfare and Minor Irrigation) :—

(*a*) The construction work of the Chakenahalli Project was commenced on 7th January 1960 and the estimated cost of the Project was Rs. 8 lakhs at the commencement of the work.

(*b*) The work was entrusted to Messrs. Karnataka Construction Company, Holenarasipur. The time stipulated for the completion of the work was 23 months and it was not completed within the stipulated time. A copy of the tender agreement is appended.